ಆ) 1999-2000ನೇ ಸಾಲಿನಲ್ಲಿ 1109 ಕಾಮಗಾರಿಗಳಿಗೆ ರೂ. 1358.00 ಲಕ್ಷ ರೂ. ಗಳಿಗೆ ಮಂಜೂರಾತಿ ಕೊಟ್ಟಿರುತ್ತದೆ. ಇವುಗಳಲ್ಲಿ 558 ಕಾಮಗಾರಿಗಳಿಗೆ ರೂ. 407.73 ಲಕ್ಷಗಳು ಬಿಡಗಡೆ ಮಾಡಿರುತ್ತದೆ. ಆದ್ದರಿಂದ ಉಳಿದ 551 ಕಾಮಗಾರಿಗಳನ್ನು ರೂ. 950.27 ಲಕ್ಷದ ಹಣದಲ್ಲಿ 2000-01ನೇ ಸಾಲಿನಲ್ಲಿ ತೆಗೆದುಕೊಳ್ಳಲು ನಿರ್ಧರಿಸಲಾಗಿದೆ.

ಇ) 2000-01ನೇ ಸಾಲಿನಲ್ಲಿ 99-2000ನೇ ಸಾಲಿಗೆ ಅನುಮೋದನೆಗೊಂಡ ಕಾಮಗಾರಿಗಳಲ್ಲಿ ಮುಂದುವರಿಸಲು ನಿರ್ಧರಿಸಲಾಗಿದೆ. ಯಾವುದೇ ಹೊಸ ಕಾಮಗಾರಿಗಳನ್ನು ತೆಗೆದುಕೊಂಡಿಲ್ಲ.

ಈ) ಇದೆ. ಆರ್‌ಐಡಿಎಫ್ ಯೋಜನೆಯಡಿ ಒಟ್ಟು ರೂ. 6835.29 ಲಕ್ಷಗಳ ಆರ್ಥಿಕ ನೆರವನ್ನು ನಬಾರ್ಡ್‌ನಿಂದ ಪಡೆಯುವ ಸಲುವಾಗಿ ಮಂಡಳಿಯನ್ನು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದು ಈಗಾಗಲೇ ಇದಕ್ಕಾಗಿ ರಚಿಸಲಾಗಿರುವ ಸಚಿವ ಸಂಪುಟದ ಉಪ ಸಮಿತಿಯ ಮುಂದೆ ಪ್ರಸ್ತಾವನೆಯನ್ನು ಮಂಡಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಈ ಪ್ರಸ್ತಾವನೆಯ ರೂಪರೇಖೆಗಳು ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಶೇ. 60 ರಡಿಯಲ್ಲಿ ರೂ. 60.00 ಲಕ್ಷಗಳನ್ನು ನಿಗದಿಪಡಿಸಿದ್ದು, ಅದರಲ್ಲಿ ಜಲಾನಯನ ಅಭಿವೃದ್ಧಿ ಕಾಮಗಾರಿಗಳು ಕೆರೆ ನಿರ್ಮಾಣ ಕೆರೆಗಳ ನವೀಕರಣ ಕಾಮಗಾರಿಗಳು ಮತ್ತು ಶೇ.40 ರಡಿಯಲ್ಲಿ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ರೂ. 40.00 ಲಕ್ಷಗಳಂತೆ ನಿಗದಿಪಡಿಸಿದ್ದು, ರಸ್ತೆ ಮತ್ತು ಸೇತುವೆ ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ.

ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳಲ್ಲಿ ಉಳಿದಿರುವ ದಾಸ್ತಾನು

3102 - ಶ್ರೀ ಬಿ.ಎನ್. ಬಚ್ಚೇಗೌಡ (ಹೊಸಕೋಟೆ) : ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದ ಸಕ್ಕರೆ ಕಾರ್ಖಾನೆಗಳಲ್ಲಿ ಬಿಡುಗಡೆಯಾಗದೆ ಉಳಿದಿರುವ ಸಕ್ಕರೆ ಒಟ್ಟು ದಾಸ್ತಾನು ಎಷ್ಟು?*

ಆ) *ಸಕ್ಕರೆ ಬಿಡುಗಡೆಗೆ ಸರ್ಕಾರ ಕೈಗೊಂಡಿರುವ ಕಾರ್ಯಕ್ರಮಗಳೇನು?*

ಇ) *ಈ ಸಕ್ಕರೆ ಕಾರ್ಖಾನೆಗಳಿಂದ ರೈತರಿಗೆ ಪಾವತಿಸಬೇಕಾದ ಒಟ್ಟು ಬಾಕಿ ಹಣ ಎಷ್ಟು? ಎಷ್ಟು ವರ್ಷಗಳಿಂದ ರೈತರಿಗೆ ಹಣ ಬಿಡುಗಡೆ ಆಗಿಲ್ಲ. ಕಾರಣ ತಿಳಿಸುವುದು.*

ಈ) *ಕೇಂದ್ರ ಸರ್ಕಾರ ಇತ್ತೀಚೆಗೆ ಸಕ್ಕರೆ ರಫ್ತು ನೀತಿಯಿಂದ ರಾಜ್ಯದ ಸಕ್ಕರೆ ಕಾರ್ಖಾನೆಗಳಲ್ಲಿ ಉಳಿದಿರುವ ಎಷ್ಟು ಟನ್ ಸಕ್ಕರೆ ಬಿಡುಗಡೆಯಾಗುವುದು?*

ಉ) *ಸಕ್ಕರೆ ಕಾರ್ಖಾನೆಗಳು ರೈತರು ಬೆಳೆದ ಒಂದು ಟನ್ ಕಬ್ಬಿಗೆ ಈಗ ಕೊಡುತ್ತಿರುವ ಹಣ ಎಷ್ಟು? ಒಂದು ಟನ್ನಿಗೆ ರೂ. 1000 ಗಳನ್ನು ಕೊಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?*

ಶ್ರೀ ಎ. ಕೃಷ್ಣಪ್ಪ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು) :

ಅ) ದಿನಾಂಕ 30-9-2000 ರಲ್ಲಿದ್ದಂತೆ ಒಟ್ಟು 9.16 ಲಕ್ಷ ಟನ್ ಸಕ್ಕರೆ ದಾಸ್ತಾನಿದೆ.

ಆ) ಸಕ್ಕರೆ ಬಿಡುಗಡೆಯು ಕೇಂದ್ರ ಸರ್ಕಾರದ ನಿಯಂತ್ರಣದಲ್ಲಿದೆ. ಅಗತ್ಯ ಸನ್ನಿವೇಶಗಳಲ್ಲಿ ಹೆಚ್ಚಿನ ಸಕ್ಕರೆ ಬಿಡುಗಡೆಗೆ ಕೇಂದ್ರ ಸರ್ಕಾರವನ್ನು ಕೋರಲಾಗುತ್ತಿದೆ. ಕೇಂದ್ರ ಸರ್ಕಾರವೂ ಕೂಡ ರಫ್ತು ಮಾಡಲು ಕ್ರಮ ಕೈಗೊಂಡಿದೆ.

ಇ) 15-8-2000 ರಲ್ಲಿದ್ದಂತೆ ರಾಜ್ಯದ ಎಲ್ಲಾ ಸಕ್ಕರೆ ಕಾರ್ಖಾನೆಗಳಿಂದ ಒಟ್ಟು ರೂ. 8922.74 ಲಕ್ಷ ಕಬ್ಬು ಬೆಲೆ ಬಾಕಿ ಇದೆ. ಇದರಲ್ಲಿ ಹಾಲಿ ವರ್ಷದ ಬಾಕಿ ರೂ. 6640.13 ಲಕ್ಷ ಹಾಗೂ ಹಿಂದಿನ ವರ್ಷಗಳ ಬಾಕಿ ರೂ. 2282.61 ಲಕ್ಷಗಳಾಗಿವೆ.

ಸಕ್ಕರೆ ಬೆಲೆಯಲ್ಲಿಯ ಕುಸಿತದಿಂದಾಗಿ ಸಕ್ಕರೆ ಮಾರಾಟವಾಗದೇ ರೈತರಿಗೆ ಕೊಡಬೇಕಾದ ಬಾಕಿ ತೀರುವಳಿಯಾಗದೇ ಬಾಕೀ ಉಳಿದಿದ್ದು ಇದೆ. ಇತ್ತೀಚೆಗೆ ಸಕ್ಕರೆ ಬೆಲೆಯಲ್ಲಿ ಚೇತರಿಕೆ ಕಂಡು ಬಂದಿದ್ದರಿಂದ ಸಕ್ಕರೆ ಮಾರಾಟವಾಗಿ ಆದಷ್ಟು ಶೀಘ್ರದಲ್ಲಿ ಬಾಕಿ ತೀರುವಳಿಯಾಗುವ ನಿರೀಕ್ಷೆ ಇದೆ.

ಈ) ಇತ್ತೀಚಿನ ರಫ್ತು ನೀತಿಯ ಪ್ರಕ್ರಿಯೆ ಈಗತಾನೆ ಪ್ರಾರಂಭವಾಗಿದೆ. ರಾಜ್ಯದ ಸಕ್ಕರೆ ಕಾರ್ಖಾನೆಗಳೂ ಕೂಡ ಈ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿವೆ.

ಉ) ಸಕ್ಕರೆ ಕಾರ್ಖಾನೆಗಳು ಸುಮಾರು ರೂ. 700 ರಿಂದ ರೂ. 850 ರ ದರದಲ್ಲಿ ಪ್ರತಿ ಟನ್ನಿಗೆ ಬೆಲೆ ಕೊಡುತ್ತಿದ್ದು ರೂ. 1000 ಪ್ರತಿ ಟನ್ನಿಗೆ ಕೊಡುವ ಯಾವ ಪ್ರಸ್ತಾವನೆಯೂ ಸರ್ಕಾರದ ಮುಂದೆ ಇರುವುದಿಲ್ಲ.

ಗುಲ್ಬರ್ಗಾ ಜಿಲ್ಲೆ ಸೇಡಂ ಕ್ಷೇತ್ರದ ಪಶು ವೈದ್ಯಕೀಯ ಮತ್ತು ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳಲ್ಲಿ ಹುದ್ದೆಗಳನ್ನು ತುಂಬದೆ ರೈತರಿಗೆ ಅನಾನುಕೂಲ

3103 - ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ (ಸೇಡಂ) : ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗುಲ್ಬರ್ಗಾ ಜಿಲ್ಲೆಯ ಸೇಡಂ ಕ್ಷೇತ್ರ (ಸೇಡಂ ತಾಲ್ಲೂಕು ಮತ್ತು ಚಿತ್ತಾಪುರ ತಾಲ್ಲೂಕಿನ 11 ಗ್ರಾಮಗಳು ಕೂಡಿದ) ಸೇಡಂ ನಗರದ ಪಶುವೈದ್ಯಕೀಯ ಆಸ್ಪತ್ರೆ ಇದ್ದು, ಈ ಕ್ಷೇತ್ರದಲ್ಲಿ ಒಟ್ಟು ಪ್ರಾಥಮಿಕ ಪಶು ಚಿಕಿತ್ಸಾಲಯ ಹಾಗೂ ಪಶು ಚಿಕಿತ್ಸಾ ಘಟಕಗಳು ಎಷ್ಟು ಆ ಪೈಕಿ ಮೇಲ್ದರ್ಜೆಗೇರಿಸಿರುವ ಪಶು ವೈದ್ಯಕೀಯ ಕೇಂದ್ರಗಳೆಷ್ಟು?*

ಆ) *ಸೇಡಂ ಕೇಂದ್ರ ಸ್ಥಾನದಲ್ಲಿರುವ ಪಶುವೈದ್ಯಕೀಯ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿ ಹುದ್ದೆಗಳೆಷ್ಟು? ಇತರ ಸಿಬ್ಬಂದಿ ವರ್ಗದವರ ಹುದ್ದೆಗಳೆಷ್ಟು? ಇದರಲ್ಲಿ ಖಾಲಿ ಇರುವ ಹುದ್ದೆಗಳು ಎಷ್ಟು? ಮೇಲ್ದರ್ಜೆಗೇರಿಸಿರುವ ಆಸ್ಪತ್ರೆಗಳಲ್ಲಿ ವೈದ್ಯಾಧಿಕಾರಿ ಹಾಗೂ ಸಿಬ್ಬಂದಿ ಹುದ್ದೆಗಳೆಷ್ಟು, ಖಾಲಿ ಇರುವ ಸ್ಥಾನಗಳೆಷ್ಟು?*